ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ: 9480985555

# ಸವಾಲುಗಳ ನಡುವೆ ಬೂದು ನೀರು ನಿರ್ವಹಣೆಯಲ್ಲಿ ಮಾದರಿಯಾಗಿರುವ ಮಂಡ್ಯ ಜಿಲ್ಲಾ ಗ್ರಾಮಗಳು



ಶುದ್ಧ ನೀರು ಉತ್ತಮ ಆರೋಗ್ಯಕ್ಕೆ ಮುಖ್ಯ, ಅಶುದ್ಧ ನೀರು ಅದೇ ಆರೋಗ್ಯಕ್ಕೆ ಶತ್ರು ಎನ್ನುವುದು ಸಾರ್ವಕಾಲಿಕ ಸತ್ಯ. ಶುದ್ಧ ನೀರಿನ ಸೇವನೆಯ ಜೊತೆ ಜೊತೆಗೆ ಜಲಮೂಲಗಳ ಸಂರಕ್ಷಣೆ ಮತ್ತು ನಿರ್ವಹಣೆ ಕೂಡ ಅಷ್ಟೇ ಮುಖ್ಯ.

ಗೃಹಬಳಕೆಗೆ ಉಪಯೋಗಿಸಿದ ನೀರು, ಕೊಳಚೆ ನೀರನ್ನು ಸಮರ್ಪಕವಾಗಿ ನಿರ್ವಹಿಸದೆ ಇದ್ದರೆ ಆರೋಗ್ಯದ ಮೇಲೆ ಅಡ್ಡಪರಿಣಾಮ ಖಚಿತ. ಮಂಡ್ಯ ಜಿಲ್ಲೆಯ ರಾಗಿಮುದ್ದನಹಳ್ಳಿ, ಗುಮ್ಮನಹಳ್ಳಿ, ಕುಂಬಾರಕೊಪ್ಪಲು, ಹೊನ್ನೇನಹಳ್ಳಿ, ಬಸವನಗುಡಿಕೊಪ್ಪಲು, ಹುಣಸೇಕಟ್ಟೆಕೊಪ್ಪಲು, ಹೊಸೂರು, ಹೆಳವರಕೊಪ್ಪಲು ರಾಘಿಮುದ್ದನಹಳ್ಳಿ ಹೊಸ ಬಡಾವಣೆ ಗ್ರಾಮಗಳು ಇದಕ್ಕೆ ಉದಾಹರಣೆಯಂತಿದ್ದವು.

ಈ ಗ್ರಾಮಗಳಲ್ಲಿ ಗ್ರಾಮದ ಕೊಳಚೆ ನೀರನ್ನು ಸಮರ್ಪಕವಾಗಿ ನಿರ್ವಹಿಸದೆ ಇದ್ದಿದ್ದರಿಂದ ಸಾರ್ವಜನಿಕವಾಗಿ ಹರಿದುಹೋಗಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿತ್ತು. ಇಲ್ಲಿನ ಗ್ರಾಮಸ್ಥರು ಕೂಡ ಇದರ ಬಗ್ಗೆ ಹೆಚ್ಚಿನದಾಗಿ ಪ್ರಾಮುಖ್ಯತೆ ನೀಡದ ಹಿನ್ನಲೆ ಬೂದು ನೀರನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿರಲಿಲ್ಲ.

ಆದರೆ ಜನರ ಆರೋಗ್ಯ, ಸ್ವಚ್ಛತೆಯನ್ನು ಗಮನದಲ್ಲಿಟ್ಟುಕೊಂಡು ಚುನಾಯಿತ ಪ್ರತಿನಿಧಿಗಳು ಹಾಗೂ ಹಲವಾರು ಸಾರ್ವಜನಿಕರು ಒಂದೆಡೆ ಸೇರಿ ಬೂದು ನೀರು ನಿರ್ವಹಣೆಯ ಮಹತ್ವ, ಅದರ ಅನುಕೂಲ ಹಾಗೂ ಬೂದು ನೀರನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದೇ ಹೋದರೆ ಎದುರಾಗುವ ಗಂಭೀರ ಸಮಸ್ಯೆಗಳ ಬಗ್ಗೆ ಪ್ರತಿ ಗ್ರಾಮದಲ್ಲಿ ಜನರಿಗೆ ಮಾಹಿತಿ ಮೂಲಕ ತಿಳುವಳಿಕೆ ನೀಡಿ ಬೂದುನೀರು ಕಾಮಗಾರಿ ಕೈಗೊಳ್ಳುವಂತೆ ಉತ್ತೇಜಿಸಲಾಯಿತು.

## ಕಾಮಗಾರಿ ಅನುಷ್ಠಾನದ ಸಂದರ್ಭದಲ್ಲಿ ಎದುರಾದ ಅಡಚಣೆಗಳು:

ಬೂದು ನೀರು ನಿರ್ವಹಣೆ ಕಾಮಗಾರಿ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಎದುರಾದವು. "ಗ್ರಾಮದ ಕೊಳಚೆ ನೀರು ಹರಿದು ಬೇರೆಲ್ಲೊ ಸೇರುತ್ತದೆ, ಇದರಿಂದ ಯಾರಿಗೂ ತೊಂದರೆಯಿಲ್ಲ. ಬದಲಾಗಿ ಇಂಗುಗುಂಡಿ ನಿರ್ಮಿಸಲು ಹೊರಟರೆ ಕಾಮಗಾರಿಗೆ ಹಣ ವ್ಯಯಿಸಬೇಕಾಗುತ್ತದೆ" ಎಂಬೆಲ್ಲಾ ಟೀಕೆಗಳು ಎದುರಾದವು.

ಈ ಎಲ್ಲಾ ಟೀಕೆಗಳನ್ನು ಎದುರಿಸಿದ ನಂತರ ಜನಪ್ರತಿನಿಧಿಗಳು ಸಾರ್ವಜನಿಕರಿಗೆ ಬೂದು ನೀರು ನಿರ್ವಹಣೆಯಿಂದಾಗುವ ಲಾಭಗಳು, ಹಾಗೂ ನೀರು ಇಂಗುವುದರಿಂದಾಗುವ ಪ್ರಯೋಜನಗಳ ಬಗ್ಗೆ ವಿವರವಾಗಿ ತಿಳಿಸಲಾಯಿತು. ಬೂದು ನೀರು ನಿರ್ವಹಣೆಯ ಮಹತ್ವ ತಿಳಿದ ಬಳಿಕ ಗ್ರಾಮಸ್ಥರು ಕಾಮಗಾರಿಯನ್ನು ಕಾರ್ಯರೂಪಕ್ಕೆ ತರಲು ಸಕ್ರಿಯವಾಗಿ ಪಾಲ್ಗೊಂಡರು.

ಬೂದು ನೀರು ನಿರ್ವಹಣೆ ಕೆಲಸವು ಸರ್ಕಾರಗಳ ಉತ್ತಮ ಕಲ್ಪನೆಯಾಗಿದ್ದು ಇದನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸುವಲ್ಲಿ ಮಂಡ್ಯ ಜಿಲ್ಲೆಯ ಗ್ರಾಮಗಳು ಯಶಸ್ಸು ಕಂಡಿವೆ.

